# ಸ್ವಾತಂತ್ರ್ಯೋತ್ಸವ ವಿಜ್ಞಾನೋತ್ಸವ

ಮಾರ್ಚ್ 4, 1958. ಭಾರತದ ವಿಜ್ಞಾನ ಇತಿಹಾಸದಲ್ಲೊಂದು ಮಹತ್ವದ ದಿನ. ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ ದೇಶದ ಸಮಗ್ರ ಅಭಿವೃದ್ಧಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಅತಿ ಮುಖ್ಯ ಮತ್ತು ನಿರ್ಣಾಯಕ ಎಂದು ನಿರ್ಧರಿಸಿ, ದೇಶಕ್ಕೊಂದು ವೈಜ್ಞಾನಿಕ ನೀತಿಸಂಹಿತೆಯನ್ನು ಸಂವಿಧಾನ ಬದ್ಧವಾಗಿ ರೂಪಿಸಿದರು. ಆ ನೀತಿಯ ಮುಖ್ಯ ಉದ್ದೇಶ ಮತ್ತು ಗುರಿಗಳಲ್ಲಿ ಎರಡು ಅಂಶಗಳು ಪ್ರಮುಖವಾಗಿದ್ದವು.

ಒಂದು: ದೇಶದಲ್ಲಿ ಲಭ್ಯವಿರುವ ಬಂಡವಾಳ ಮತ್ತು ಸಂಪನ್ಮೂಲಗಳನ್ನು ಬಳಸಿಕೊಂಡು ಶುದ್ಧ ಮತ್ತು ಆನ್ವಯಿಕ (Pure and applied) ವಿಜ್ಞಾನ ರಂಗಗಳೆರಡರಲ್ಲೂ ಸಂಶೋಧನೆ ನಡೆಸುವುದರ ಜೊತೆಗೆ ದೇಶಕ್ಕೊಂದು ವೈಜ್ಞಾನಿಕ ನೆಲೆಯೊದಗಿಸುವುದು.

ಎರಡು: ಕೈಗೊಂಡ ಸಂಶೋಧನೆಗಳ ಲಾಭವನ್ನು ದೇಶದ ಅಭಿವೃದ್ಧಿಗೆ ಬಳಸುತ್ತಲೇ ಜನರಲ್ಲಿ ವೈಜ್ಞಾನಿಕ ಮನೋಧರ್ಮ ಬೆಳೆಸುವುದು, ವಿಜ್ಞಾನ ಸಂಸ್ಥೆಗಳನ್ನು ಸ್ಥಾಪಿಸಿ ತಂತ್ರಜ್ಞರನ್ನು, ವಿಜ್ಞಾನಿಗಳನ್ನು ರೂಪಿಸುವುದು, ವೈಜ್ಞಾನಿಕ ಸಂಶೋಧನೆ ಮತ್ತು ಅಧ್ಯಯನಗಳಿಗೆ ಪ್ರೋತ್ಸಾಹ ನೀಡುವುದು ಆ ನೀತಿಯ ಪ್ರಮುಖ ಅಂಶಗಳಾಗಿದ್ದವು. ಅಂದಿನಿಂದ ಶಾಸ್ತ್ರೀಯವಾಗಿ ಪ್ರಾರಂಭವಾದ ವಿಜ್ಞಾನದ ಕೆಲಸ ಇಂದೂ ಸಮರ್ಥವಾಗಿ ಮುಂದುವರೆದಿದೆಯಲ್ಲದೆ ನೆಹರೂ ಬಯಸಿದ್ದನ್ನೆಲ್ಲ ಸಾಕಾರವಾಗಿಸಿ ಅನೇಕ ವೈಜ್ಞಾನಿಕ ಕ್ರಾಂತಿಗಳಿಗೆ ಜನ್ಮ ನೀಡಿದೆ.

ಆಗ ದೇಶಕ್ಕೆ ಸ್ವಾತಂತ್ರ್ಯ ಬಂದು ಒಂದು ದಶಕ ಕಳೆದಿತ್ತು. ಹೊಸದಾಗಿ ಆಡಳಿತ ನಿರ್ವಹಿಸುವುದರ ಜೊತೆಗೆ ದೇಶದ ಸಮಗ್ರ ಅಭಿವೃದ್ಧಿಯ ಬಗ್ಗೆ ಒತ್ತು ನೀಡಬೇಕಿತ್ತು. ಪಂಚವಾರ್ಷಿಕ ಯೋಜನೆಗಳು ಕಾರ್ಯರೂಪಕ್ಕೆ ಬಂದಿದ್ದವು. ಹೊರಜಗತ್ತು ವಿಜ್ಞಾನದ ಮೂಲಕ ತಾನು ಕಂಡುಕೊಂಡ ಹೊಸ ಸತ್ಯಗಳಿಂದ ಪ್ರಚ್ಛನ್ನ ಶಕ್ತಿ ಪಡೆದು ಆತ್ಮವಿಶ್ವಾಸದಿಂದ ಬೀಗುತ್ತಿತ್ತು. ಆದರೆ ಇಲ್ಲಿನ ಪರಿಸ್ಥಿತಿ ತುಸು ಭಿನ್ನವಾಗಿತ್ತು. ವಿಜ್ಞಾನ ತಂತ್ರಜ್ಞಾನ ನೆಲೆ ಕಂಡುಕೊಳ್ಳುವ ಮೊದಲು ಈ ದೇಶದ ಶೈಕ್ಷಣಿಕ ಪರಿಸರ ರೂಪುಗೊಳ್ಳಬೇಕಿತ್ತು. ಪ್ರಯೋಗಶೀಲರಾಗಿದ್ದ ವಿಜ್ಞಾನಿ, ತಂತ್ರಜ್ಞರಿಗೆ ಬೇಕಾದಷ್ಟು ಬಂಡವಾಳ ಮತ್ತು ಆಧುನಿಕ ಪ್ರಯೋಗಾಲಯಗಳ ಸೌಲಭ್ಯ ಇರಲಿಲ್ಲ.

ಆ ದಿನಗಳಲ್ಲಿ ಸರ್. ಸಿ.ವಿ. ರಾಮನ್, ಮೇಘನಾದ ಸಹ, ವಿಕ್ರಮ್ ಸಾರಾಭಾಯಿ, ಹೋಮಿ ಭಾಭಾ, ಸತ್ಯೇಂದ್ರನಾಥ ಬೋಸ್, ರಾಮಸ್ವಾಮಿ ಮೊದಲಿಯಾರ್, ಎನ್. ಆರ್. ಸರ್ಕಾರ್ ಅವರಂಥ ಮೇಧಾವಿಗಳು ವಿಜ್ಞಾನರಂಗದ ಮುಂಚೂಣಿಯಲ್ಲಿದ್ದರು. ಅವರಲ್ಲಿ ಸಮರ್ಥ ನಾಯಕತ್ವದ ಗುಣಗಳಿದ್ದವು. 'ರಾಮನ್ ಪರಿಣಾಮ'ಕ್ಕೆ ನೊಬೆಲ್ ಪ್ರಶಸ್ತಿ ಬಂದು ಎರಡು ದಶಕಗಳಾಗಿದ್ದವು. ಗಣಿತ ಕ್ಷೇತ್ರದಲ್ಲಿ ಹೊಸ ಜಗತ್ತನ್ನೆ ತೆರೆದು ತೋರಿದ ರಾಮಾನುಜನ್ ಪ್ರಪಂಚದ ಶ್ರೇಷ್ಠ ಗಣಿತಜ್ಞರ ಸಾಲಿಗೆ ಸೇರಿದ್ದರು. ಜೆ.ಸಿ. ಬೋಸ್, ಸಹಾ, ಭಾಟ್ನಾಗಾರ್, ಎಸ್. ಎನ್. ಬೋಸ್, ಮುಂತಾದವರು ತಮ್ಮ ಸಂಶೋಧನೆ ಮತ್ತು ನಿರಂತರ ದುಡಿಮೆಯಿಂದ ಭಾರತೀಯ ವಿಜ್ಞಾನಯುಗದ ರಮ್ಯಯುಗವನ್ನೇ ಪ್ರಾರಂಭಿಸಿದ್ದರು. ದೇಶದ ವೈಜ್ಞಾನಿಕ ನೆಲೆ ರೂಪಿಸುವ ಕೆಲಸದಲ್ಲಿ ಇವರಂತೆ ಅಹೋರಾತ್ರಿ ದುಡಿಯುವವರ ಸಂಖ್ಯೆ ಹೆಚ್ಚಾಗಿದ್ದುದರಿಂದ

